# ಬಾಹ್ಯಾಕಾಶ ಕ್ಷೇತ್ರದಲ್ಲಿ ಪಾಲುದಾರಿಕೆ ಪ್ರಸ್ತುತ

■ ಇಸ್ರೋ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಇಂಗಿತ



ಭಾರತೀಯ ಕೈಗಾರಿಕೆಗಳ ಒಕ್ಕೂಟ ಬೆಂಗಳೂರಿನಲ್ಲಿ ಆಯೋಜಿಸಿರುವ ಬಾಹ್ಯಾಕಾಶ ವಹಿವಾಟು ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಇಸ್ರೋ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಉದ್ಘಾಟಿಸಿದರು.

**ಬೆಂಗಳೂರು:** ಹಿಂದೆ ಬಾಹ್ಯಾಕಾಶ ಕ್ಷೇತ್ರದಲ್ಲಿ ವಿವಿಧ ರಾಷ್ಟ್ರಗಳ ನಡುವೆ ತೀವ್ರ ಪೈಪೋಟಿ ಇತ್ತು. ಆದರೆ ಇಂದು ಪರಸ್ಪರ ಸಹಕಾರ, ಪಾಲುದಾರಿಕೆಯಲ್ಲಿ ಬಾಹ್ಯಾಕಾಶ ಯೋಜನೆಗಳನ್ನು ಕೈಗೊಳ್ಳುವುದು ಹೆಚ್ಚು ಪ್ರಸ್ತುತವಾಗುತ್ತಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಹೇಳಿದ್ದಾರೆ.

ಭಾರತೀಯ ಕೈಗಾರಿಕೆಗಳ ಮಹಾ ಒಕ್ಕೂಟ (ಸಿಐಐ) ನಗರದಲ್ಲಿ ಏರ್ಪಡಿಸಿರುವ ಮೂರು ದಿನಗಳ ಬಾಹ್ಯಾಕಾಶ ವಹಿವಾಟು ಬಗೆಗಿನ ಅಂತಾರಾಷ್ಟ್ರೀಯ ಸಮಾವೇಶವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

ಮೊದಲ ಪ್ರಯತ್ನದಲ್ಲೇ ಅನ್ವೇಷಣಾ ನೌಕೆಯನ್ನು ಕೆಂಪುಗ್ರಹದ ಕಕ್ಷೆಗೆ ಸೇರ್ಪಡೆಗೊಳಿಸಿದ ಯಶಸ್ಸಿನಲ್ಲಿ ಭಾರತದ 125 ಸಾರ್ವಜನಿಕ ಮತ್ತು ಖಾಸಗಿ ಉದ್ದಿಮೆಗಳ ಪಾಲು ಇರುವುದೇ ಇದಕ್ಕೆ ಸಾಕ್ಷಿ ಎಂದರು.

ಭಾರತದಲ್ಲಿನ ಫ್ರಾನ್ಸ್ ರಾಯಭಾರಿ ಫ್ರಾನ್ಸವಾ ರಿಷಿಯೇ, ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತು ಫ್ರಾನ್ಸ್ ನಡುವಿನ ಪರಸ್ಪರ ಸಹಕಾರ ಒಪ್ಪಂದದ ಬಗ್ಗೆ ಸ್ಮರಿಸಿದರು.

ಸಿಐಐ ಕರ್ನಾಟಕ ಶಾಖೆ ಮಾಜಿ ಅಧ್ಯಕ್ಷ ವಿನಯ್ ಎಲ್ ದೇಶಪಾಂಡೆ, ದಕ್ಷಿಣ ವಲಯದ ಮಾಜಿ ಅಧ್ಯಕ್ಷ ಎಂ. ಲಕ್ಷ್ಮೀನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

## 5 ಉಪಗ್ರಹಗಳ ಉಡಾವಣೆ

ಇನ್ನು 6 ವಾರಗಳ ಅವಧಿಯಲ್ಲಿ ಇಸ್ರೋ 5 ಉಪಗ್ರಹಗಳನ್ನು ಉಡಾವಣೆ ಮಾಡಲಿದೆ ಎಂದು ಆಂಟ್ರಿಕ್ಸ್ ಕಾರ್ಪೊರೇಷನ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಎ.ಎಸ್. ಹೆಗಡೆ ತಿಳಿಸಿದರು.

ಡಿ.5ರಂದು ಫ್ರೆಂಚ್‌ನ ಏರಿಯಾನ್ ಉಡಾವಣಾ ನೆಲೆಯಿಂದ ಭಾರತದ ಜಿಸ್ಯಾಟ್ 16 ಉಪಗ್ರಹದ ಉಡಾವಣೆಯಾಗಲಿದೆ. ಇದಾದ ಬಳಿಕ ಡಿಸೆಂಬರ್ ಮಧ್ಯದಲ್ಲಿ ಬಾಹ್ಯಾಕಾಶಯಾನಿಗಳ ಕೋಶದ ಮಾದರಿ ಹೊತ್ತ ಜಿಎಸ್‌ಎಲ್‌ವಿ ಮಾರ್ಕ್ 3 ಉಡಾವಣೆ ನಿಗದಿಯಾಗಿದೆ. ಇದರ ಜತೆಗೆ ಐಆರ್‌ಎನ್‌ಎಸ್‌ಎಸ್ 1ಡಿ ದಿಕ್ಸೂಚಿ ಉಪಗ್ರಹ ಸರಣಿಯ 4ನೇ ಉಪಗ್ರಹ ಉಡಾವಣೆಯಾಗಲಿದೆ.

ಇನ್ನೆರಡು ವಿದೇಶಿ ಉಪಗ್ರಹಗಳು ಕೂಡ ಇದೇ ಸಂದರ್ಭದಲ್ಲಿ ಉಡಾವಣೆಗೊಳ್ಳಲಿವೆ ಎಂದರು.

## ನಾಸಾದೊಂದಿಗೆ ಒಪ್ಪಂದ

ಕೆಂಪು ಗ್ರಹದ ಕಕ್ಷೆ ಸುತ್ತುತ್ತಿರುವ ಅಮೆರಿಕದ ಮಾವೆನ್ ಹಾಗೂ ಭಾರತದ ಮಾಮ್ ಸಂಗ್ರಹಿಸುವ ಮಾಹಿತಿಯನ್ನು ವಿನಿಮಯ ಮಾಡಿಕೊಂಡು ಅಧ್ಯಯನ ನಡೆಸಲು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾದೊಂದಿಗೆ ಒಪ್ಪಂದದ ಬಗ್ಗೆ ಚಿಂತನೆ ನಡೆಸಿರುವುದಾಗಿ ರಾಧಾಕೃಷ್ಣನ್ ಹೇಳಿದರು. ಉಪಗ್ರಹಗಳನ್ನು ತಯಾರಿಸಿ, ಉಡಾವಣೆ ಮಾಡುವ ಬಗ್ಗೆ ಕೂಡ ನಾಸಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಒಪ್ಪಂದದನ್ವಯ ಭಾರತವೇ ಅಮೆರಿಕದ ಉಪಗ್ರಹವನ್ನು ಸಿದ್ಧಪಡಿಸಿ, ತನ್ನದೇ ಉಡ್ಡಯನ ಯಂತ್ರದ ನೆರವಿನಿಂದ ಅದನ್ನು ಕಕ್ಷೆಗೆ ಸೇರಿಸಲಿದೆ. 2019-2020ರ ವೇಳೆಗೆ ಮೊದಲ ಉಪಗ್ರಹ ಉಡಾವಣೆಗೊಳ್ಳುವ ಸಾಧ್ಯತೆ ಇರುವುದಾಗಿ ತಿಳಿಸಿದರು.




ಈ ವರ್ಗದಲ್ಲಿ ಅನೇಕ ಅದ್ಭುತ ವೈಶಿಷ್ಟ್ಯತೆಗಳೊಂದಿ
ಸ್ಟೈಲ್ ಒದಗಿಸುತ್ತಾ ಸಾವಿರಾರು ಕುಟುಂಬಗಳನ್ನು
'ಎಕ್ಸ್‌ಸ್ಟ್ರಾ' ಪರ್ಫಾರ್ಮೆನ್ಸ್, ಅತ್ಯುತ್ತಮ ಸವಾರಿ ಮ
ಡ್ರೈವ್ ಮಾಡಿ ಮತ್ತು ಎಕ್ಸ್‌ಸ್ಟ್ರಾ ಗಿಫ್ಟ್ ಗೆಲ್ಲಿರಿ.




ಬೆಲೆ ಪ್ರಾರಂಭ ₹4.73 ಲಕ್ಷಗಳು (ಪೆಟ್ರೋಲ್) ಮತ್ತು ₹5.62

Call Centre
1-800-11-4645
098-7356-4645
24X7 Road Assist.
1-800-102-4645
0124-2564645

Complete peace of mind
*Terms and conditions apply. *Automati
change without prior notice. Hyundai urg

FOR INFORMATION CONTA
9900043276 •VASANTHNAGAR
9844266876 •HOSUR ROAD, P
MYSORE ROAD, PH: 26984000
9900022846 MANGALORE: KA
GULBARGA: SRI VENKATESH HYUNDAI, PH: 261666 MYSORE: ADVA
HYUNDAI, MADIKERI, PH: 222030, 9538970806 •GONIKOPPA, PH: 279
268123, 7795800023 •CHIKMANGLUR, PH:233933, 7795800037 HUBL
222783, 9535855966 PUTTUR: KANCHANA HYUNDAI, PH: 236615-16,
PH: 7022001218/19/20, 7022001202 TUMKUR: VICKY HYUNDAI, PH: 8


Editor: THIMMAPPA BHAT. Published by THIMMAPPA BHAT on behalf of VRL Media Limited, No.24, 1st & 3
Media Limited, No.193/A, 11th Main, 2nd Stage, 3rd Phase, Peenya Industrial Area, Bengaluru-560 058 and a
Reproduction in whole or in part without written permission is prohibited. RNI NO: KARKAN/2011/41421, e